ಎರಡೋ, ಇತ್ತೀಚೆಗೆ ಕಾಕಿ ಜೊತೆ 'ಕೃಷ್ಣ–ಸುದಾಮ' ಸ್ವಲ್ಪ ದಿನಗಳ ಹಿಂದೆ 'ಶೋಲೇ'. ದಿನಾ ಶೂಪಾಲಿಶ್ ಮಾಡುತ್ತಾ 'ಯೆ ದೋಸ್ತೀ' ಗುನುಗುನಿಸುತ್ತಾ ಗಬ್ಬರ್– ಧರ್ಮೇಂದ್ರ– ಅಮಿತಾಭರ ಸಾಹಸಗಳನ್ನು ಮೆಲುಕು ಹಾಕುತ್ತಿದ್ದ ರಾಮು. ಸಿನೆಮಾ ಎಂದರೆ ತುಂಬಾ ಆಸೆ ಅವನಿಗೆ. ಆದರೆ ರಾತ್ರಿ ಶೋಗೆ ಹೋಗಲು ಕಾಕಿಗೆ ಉತ್ಸಾಹವಿಲ್ಲ. ಬೇರೆಯವರೊಂದಿಗೆ ಹೋಗಲು ಅವಳು ಬಿಡುತ್ತಿರಲಿಲ್ಲ.

ಅಂದೂ ಎಂದಿನಂತೆಯೇ ರಾಮು ಕೆಲಸದಲ್ಲಿ ಮುಳುಗಿ ಹೋಗಿದ್ದಾಗ, ಇವನ ಎದುರಿಗೇ ರಸ್ತೆಯಲ್ಲಿ ವ್ಯಾನೊಂದು ನಿಂತಿತ್ತು. ಅದರಿಂದ ನಾಲ್ಕೈದು ಜನ ಗಂಡಸರು ಇಳಿದು ಬಂದು, ಒಂದು ಕ್ಷಣ ಇವರೆಲ್ಲರ ಮೇಲೆ ಕಣ್ಣು ಹಾಯಿಸಿದ್ದರು. ಎಲ್ಲರ ಹೃದಯ ಭಯದಿಂದ ಹೆಪ್ಪುಗಟ್ಟಿತು. ಪೊಲೀಸರ ಕಡೆಯವರೊ ಏನೋ! ಆದರೆ ಆ ನಾಲ್ಕೈದು ಜನ ರಾಮುವಿನ ಹತ್ತಿರ ನಡೆದು ಬಂದಂತೆ, ಅವನು ಸಮಾಧಾನ ಮಾಡಿಕೊಂಡ, 'ಪಾಲಿಶ್‌ಗಾಗಿ ಬಂದಿರಬೇಕು. ಇಷ್ಟು ಜನ ಒಟ್ಟಿಗೆ ಬೇರೆ!'

'ತಲೆ ಎತ್ತಿ ಕೇಳಿದ ರಾಮು. 'ಪಾಲಿಶ್ ಹಾಕಲೇ ಸಾಬ್?'

ಅವರ ಮಧ್ಯೆ ನಿಂತಿದ್ದ ಕುರ್ತಾ, ಪ್ಯಾಂಟು ಧರಿಸಿದ ಹಸನ್ಮುಖಿಯಾದ ಸುಮಾರು 45 ವರ್ಷದ ವ್ಯಕ್ತಿಯೊಬ್ಬರು ಇವನ ಹತ್ತಿರ ಬಂದು ಹೇಳಿದರು. 'ನಾವು ಪಾಲಿಶ್‌ಗಾಗಿ ಬಂದಿಲ್ಲ. ನಾವು ದೂರದರ್ಶನ ಕೇಂದ್ರದವರು. ನಿನ್ನ ಹಾಗೆ, ದಿನವೆಲ್ಲಾ ಕಷ್ಟಪಟ್ಟು ತಮ್ಮ ಸಂಪಾದನೆ ತಾವೇ ಮಾಡಿಕೊಂಡು ಜೀವನ ನಡೆಸ್ತಾರಲ್ಲಾ, ಅಂತಹ ಪುಟ್ಟ ಮಕ್ಕಳನ್ನು ನಾವು ಟಿ.ವಿ.ನಲ್ಲಿ ಸಂದರ್ಶನಕ್ಕೆಂದು ಕರೆದುಕೊಂಡು ಹೋಗೋಣಾಂತ ಬಂದಿದ್ದೀವಿ. ನೀನು ಟಿ.ವಿ. ನೋಡಿರ್ಬೇಕಲ್ಲಾ. ಅದರಲ್ಲಿ ನಿಂಗೂ ಬರಬೇಕಂತ ಆಸೆ ಇದೆಯೋ ಇಲ್ವೊ?...'

ಒಂದು ಕ್ಷಣ ರಾಮೂಗೆ ಏನೂ ಅರ್ಥವಾಗಲಿಲ್ಲ.

'ಅಂದ್ರೆ...'

'ನಾವು ಒಂದು ಪ್ರೋಗ್ರಾಂಗೋಸ್ಕರ ನಿನ್ನನ್ನು ಇಂಟರ್‌ವ್ಯೂ ಮಾಡ್ತೀವಿ. ನೀನು ದೂರದರ್ಶನ ಕೇಂದ್ರಕ್ಕೆ ಬಂದು ನಮ್ಮ ಜೊತೆ ಮಾತನಾಡಬೇಕಷ್ಟೆ. ನಾನು ಕೇಳಿದ ಪ್ರಶ್ನೆಗಳಿಗೆಲ್ಲಾ ಧೈರ್ಯವಾಗಿ ಉತ್ತರ ಕೊಟ್ರೆ ಸಾಕು. ಬರುತ್ತೀಯಾ?'

ಮೊದಲು ಗಾಬರಿಗೊಂಡರೂ, ಆಮೇಲೆ ಖುಷಿಯಾಗಿ 'ಬರ್ತೀನಿ' ಎಂದು ತಲೆಯಲ್ಲಾಡಿಸಿದ ರಾಮು. ಅವನು ಬರಬೇಕಾದ ಜಾಗ, ವೇಳೆ ಎಲ್ಲಾ ವಿಷಯಗಳನ್ನೂ ವಿವರಿಸಿ ಹೇಳಿ ವಾಪಸ್ಸು ಹೋದರು ಅವರು. 'ಅಂತಾರಾಷ್ಟ್ರೀಯ ಮಕ್ಕಳ ವರ್ಷ'ದ ಅಂಗವಾಗಿ ಏರ್ಪಡಿಸಿದ್ದ 'ಗಳಿಸುವ ಮಕ್ಕಳ ಸಂದರ್ಶನ' ಕಾರ್ಯಕ್ರಮಕ್ಕಾಗಿ, ಮಕ್ಕಳನ್ನು ಕಲೆಹಾಕಲು ಸುತ್ತುತ್ತಿದ್ದರು ಅವರು.

ತಕ್ಷಣ ರಾಮೂನ ಸುತ್ತಲೂ ಜನ ಸೇರಿದರು.

'ಏನಂತೆ? ನೀನು ಟಿ.ವಿ.ಯಲ್ಲಿ ಬರ್ತೀಯಾ?'

'ಯಾವಾಗ ಹೋಗ್ಬೇಕಂತೆ, ಎಲ್ಲಿಗೇಂತ ಹೇಳಿದ್ರಾ?'

'ನೀನು ಅವರಿಗೆ ದುಡ್ಡು ಕೊಡ್ಬೇಕೋ, ಅವರು ನಿಂಗೆ ಕೊಡ್ತಾರೋ?'

'ಯಾವತ್ತು ಬರುತ್ತೆ ನಿನ್ನ ಪ್ರೋಗ್ರಾಂ?'

'ಇನ್ನೇನು ನಿನ್ನನ್ನು ಮಾತಾಡಿಸೋ ಹಾಗೇ ಇಲ್ಲ. ಟಿ.ವಿ.ಲಿ ಬಂದ್ಮೇಲೆ ದೊಡ್ಡ ಮನುಷ್ಯ ಆಗ್ಬಿಡ್ತಿ!'